**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 16.08.2021

# ಅಪ್ರಾಪ್ತ ಬಾಲಕಿಯನ್ನು ಕೊಂದ ಆರೋಪಿತನ ಬಂಧನ.




ದಿನಾಂಕ 09.08.2021 ರಂದು ಬೆಳಿಗ್ಗೆ 11:00 ಸುಮಾರಿಗೆ ಮೃತ ಅಪ್ರಾಪ್ತ ಬಾಲಕಿ, ವಯಾ:06 ವರ್ಷ, ಸಾ॥ ಮಿರಗಿ, ಹಾ॥ವ॥ ಬೋಳೆಗಾಂವ, ಇವಳು ಬೋಳೆಗಾಂವ ಗ್ರಾಮದ ಹನಮಂತ ದೇವರ ದೇವಸ್ಥಾನದಲ್ಲಿ ಆಟ ಆಡುತ್ತಿದ್ದು, ನಂತರ ಅಪ್ರಾಪ್ತ ಬಾಲಕಿಯ ಅಜ್ಜಿ ಮತ್ತು ಪಿರ್ಯಾದುದಾರರ ಮೊದಲನೇ ಮಗಳು ಮನೆಗೆ ಬಾ ಎಂದು ಅಪ್ರಾಪ್ತ ಬಾಲಕಿಯನ್ನು ಕರೆಯಲು ಹನಮಂತ ದೇವರ ದೇವಸ್ಥಾನದ ಹತ್ತಿರ ಹೋಗಿ ನೋಡಲಾಗಿ, ಅಪ್ರಾಪ್ತ ಬಾಲಕಿಯು ಹನಮಂತ ದೇವರ ದೇವಸ್ಥಾನದಲ್ಲಿ ಇರಲಿಲ್ಲ, ಆದ್ದರಿಂದ ಫಿರ್ಯಾದುದಾರ ಮತ್ತು ಸಂಬಂದಿಕರು ಹುಡುಕಾಡಿದ್ದು, ಇಲ್ಲಿಯವರೆಗೂ ಪತ್ತೆಯಗಿರುವುದಿಲ್ಲ ಅಂತಾ ಅಪ್ರಾಪ್ತ ಬಾಲಕಿಯನ್ನು ಪತ್ತೆ ಮಾಡಿಕೊಡಬೇಕು, ಅಂತಾ ಕೊಟ್ಟ ದೂರಿನ ಮೇರೆಗೆ ಹೋರ್ತಿ ಪೊಲೀಸ್ ಠಾಣಾ ಗುನ್ನಾ ನಂ, 104/2021, ಕಲಂ–363 ಐಪಿಸಿ, ನೇದ್ದರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಂಡಿದ್ದು,

ಈ ಪ್ರಕರಣದ ಪತ್ತೆ ಕುರಿತು ಶ್ರೀ ಹೆಚ್.ಡಿ.ಆನಂದಕುಮಾರ್, ಜಿಲ್ಲಾ ಪೊಲೀಸ್ ಅಧೀಕ್ಷಕರು ವಿಜಯಪುರ, ಡಾ॥ ರಾಮ್.ಎಲ್.ಅರಸಿದ್ದಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ವಿಜಯಪುರ ರವರ ಮಾರ್ಗ ದರ್ಶನದಲ್ಲಿ, ಶ್ರೀ ಶ್ರೀಧರ್ ದೊಡ್ಡಿ, ಡಿಎಸ್‌ಪಿ ಇಂಡಿ ಉಪ–ವಿಭಾಗ ರವರ ನೇತೃತ್ವದಲ್ಲಿ ಶ್ರೀ ರಾಜಶೇಖರ, ಸಿಪಿಐ ಇಂಡಿ ವೃತ್ತ, ಶ್ರೀ ಎನ್.ಬಿ.ಶಿವೂರ ಪಿಎಸ್‌ಐ ಹೋರ್ತಿ ಪೊಲೀಸ್ ಠಾಣೆ ಹಾಗೂ ಸಿಬ್ಬಂದಿ ಜನರೊನ್ನೊಳಗೊಂಡ ಒಂದು ವಿಶೇಷ ತನಿಖಾ ತಂಡ ರಚಿಸಿದ್ದು,

ಈ ಪ್ರಕರಣವು ಅತೀ ಸೂಕ್ಷ್ಮತೆಯಿಂದ ಕೂಡಿದ್ದು, ಆರೋಪಿತನು ಯಾವುದೇ ಪುರಾವೆಗಳು ಬಿಡದೆ ಇರುವದರಿಂದ ಆರೋಪಿತನ ಪತ್ತೆ ಮಾಡುವ ಕೆಲಸ ಅತೀ ಕಷ್ಟಕರವಾಗಿದ್ದರೂ ಸಹ ವಿಶೇಷ ತನಿಖಾ ತಂಡವು ಘಟನಾಸ್ಥಳವನ್ನು ಪರಿಶೀಲಿಸಿ, ಇಂತಹ ಕೃತ್ಯಗಳನ್ನು ಮಾಡುವ ಆಸಾಮಿಗಳ ಮಾಹಿತಿಯನ್ನು ಸಂಗ್ರಹಿಸಿ ಅವರನ್ನು ಶೋಧನೆ ಮಾಡಿ ಪರಿಶೀಲಿಸಿದ್ದು, ವಿಶೇಷ ತಿನಿಖಾ ತಂಡವು ಬಹಳಷ್ಟು ಪರಿಶ್ರಮಪಟ್ಟು ದಿನಾಂಕ: 15.08.2021 ರಂದು ಬೋಳೆಗಾಂವ ಗ್ರಾಮದಲ್ಲಿ ಈ ಕೆಳಗೆ ನಮೂದಿಸಿದ ಆರೋಪಿತನನ್ನು ದಸ್ತಗೀರ ಮಾಡಿ, ಠಾಣೆಗೆ ತಂದು ವಿಚಾರಣೆಗೊಳಪಡಿಸಿದಾಗ **ಆರೋಪಿತನಾದ**

1. **ಸಂಗನಗೌಡ ತಂ:ಬಾಬುಗೌಡ ಬಿರಾದಾರ, ವಯಾ:24 ವರ್ಷ, ಸಾ॥ ಬೋಳೆಗಾಂವ.**

ಈಗ ಸುಮಾರು 02 ತಿಂಗಳ ಹಿಂದೆ, ಮೃತ ಅಪ್ರಾಪ್ತ ಬಾಲಕಿಯು, ಆಟ ಆಡುವ ಕಾಲಕ್ಕೆ, ಆರೋಪಿತನ ಮನೆಯ ಮುಂದೆ ಇಟ್ಟಿದ್ದ, ಆರೋಪಿತನ ತಾಯಿಯ ಹಲ್ಲಿನ ಸೆಟ್ಟನ್ನು, ಆಟ ಆಡುತ್ತಾ ಕಲ್ಲಿನಿಂದ ಜಜ್ಜಿ ಒಡೆದು ಹಾಕಿದ್ದರಿಂದ ಎರಡು ಕುಟುಂಬದವರ ಮಧ್ಯೆ ಜಗಳ, ತಂಟೆತಕರಾರು ಆಗಿದ್ದು. ಅದೇ ಸಿಟ್ಟಿನಿಂದ ಆರೋಪಿತನು ಬೋಳೆಗಾಂವ ಗ್ರಾಮದ ಬೀರಪ್ಪ ದೇವರ ದೇವಸ್ಥಾನದ ಹಿಂಭಾಗದ ರಸ್ತೆಯಿಂದ ಅಪ್ರಾಪ್ತ ಬಾಲಕಿಯನ್ನು ಘುಸಲಾಯಿಸಿ, ತನ್ನ ಹೊಲಕ್ಕೆ ಕರೆದುಕೊಂಡು ಹೋಗಿ, ಅಪ್ರಾಪ್ತ ಬಾಲಕಿಯ ಮೂಗು ಮತ್ತು ಬಾಯಿಯನ್ನು ಬಟ್ಟೆಯಿಂದ ಒತ್ತಿಹಿಡಿದು, ಅವಳನ್ನು ಪ್ರಜ್ಞೆ ತಪ್ಪಿಸಿದ್ದು, ನಂತರ ಆಕೆಯ ಕಾಲುಗಳನ್ನು ಸುತಳಿಯಿಂದ ಕಟ್ಟಿ, ಅದೇ ಸುತಳಿಯಿಂದ ಕುತ್ತಿಗೆಗೆ ಕಟ್ಟಿ, ಒಂದು ಪ್ಲಾಸ್ಟಿಕ್ ಗೊಬ್ಬರದ ಚೀಲದಲ್ಲಿ ಹಾಕಿಕೊಂಡು, ತನ್ನ ಹೊಲಕ್ಕೆ ಹೊಂದಿಕೊಂಡಿರುವ ಹಳ್ಳಕ್ಕೆ ಹೋಗಿ ಅಲ್ಲಿ ಬಿದ್ದಿದ್ದ ಬಿದಿರು ಬಡಿಗೆಯಿಂದ ಜೋರಾಗಿ ತಲೆಗೆ ಹೊಡೆದು ಕೊಲೆ ಮಾಡಿ, ಶವವನ್ನು ಹುಲ್ಲಿನಲ್ಲಿ ಮರೆಯಾಗಿಟ್ಟಿರುತ್ತಾನೆ, ನಂತರ ಸಾಕ್ಷಿ ನಾಶ ಮಾಡುವ ಉದ್ದೇಶದಿಂದ ಶವವನ್ನು ಹಳ್ಳದಿಂದ ರಾತ್ರಿ ತೆಗೆದುಕೊಂಡು ಬಂದು, ತಮ್ಮ ಪಕ್ಕದ ಜಮೀನದ ಬಾಂದಿನ ಮೇಲೆ ಗಿಡಗಂಟಿಗಳ ಮರೆಯಲ್ಲಿ ಬಿಸಾಕಿ, ಗೊಬ್ಬರ ಚೀಲ ಮತ್ತು ಬಟ್ಟೆಯನ್ನು ಸುಟ್ಟು ಹಾಕಿರುತ್ತಾನೆ, ಅಂತಾ ತನಿಖೆಯಿಂದ ತಿಳಿದು ಬಂದಿರುತ್ತದೆ. ಆರೋಪಿತನು ಕೊಲೆ ಮಾಡಿದ ಬಗ್ಗೆ ಒಪ್ಪಿಕೊಂಡಿರುತ್ತಾನೆ.

ಈ ಪ್ರಕರಣ ಪತ್ತೆ ಮಾಡುವಲ್ಲಿ ಯಶಸ್ವಿಯಾದ ತಂಡದ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

# <u>ಕೊಲೆ ಮಾಡಿದ ಆರೋಪಿತನ ಬಂಧನ</u>




ದಿನಾಂಕ: 12.08.2021 ರಂದು ದೀಪಾ ಗಂಡ ಯಮನಪ್ಪ @ ಕುಮಾರ ಮಡಿವಾಳರ. ವಯಾ: 21 ವರ್ಷ ಸಾ:ಇಂಗಳಗಿ ತಾ॥ ಇಲಕಲ್ ಜಿಲ್ಲಾ:ಬಾಗಲಕೋಟ ಇವರು ತನ್ನ ಪಿರ್ಯಾದಿಯನ್ನು ನೀಡಿದರಲ್ಲಿ ಆರೋಪಿ

1) ವಿರೇಶ ತಂದೆ ಮಲ್ಲಪ್ಪ ಮಡಿವಾಳರ

2) ಮಡಿವಾಳಪ್ಪ ತಂ: ಮಲ್ಲಣ್ಣ ಮಡಿವಾಳರ.

3) ಕಾಶಿನಾಥ ತಂದೆ ತಮ್ಮಣ್ಣ ಮಡಿವಾಳರ ಸಾ: ಎಲ್ಲರು ಬಳಗಾನೂರ ಇವರು ಕೂಡಿ ದಿನಾಂಕ: 06.08.2021 ರಂದು ಹಣ ಕೊಡುತ್ತೇವೆ ಅಂತಾ ನನ್ನ ಗಂಡನಿಗೆ ತಮ್ಮ ಊರಾದ ಬಳಗಾನೂರ ಗ್ರಾಮಕ್ಕೆ ಸಂಜೆ ಕರೆಯಿಸಿಕೊಂಡು ಮೂರೂ ಜನರು ಕೂಡಿ ಗುತ್ತಿಹಾಳ ಇವರ ತೋಟದಲ್ಲಿ ಪಾರ್ಟಿ ಮಾಡಿ ರಾತ್ರಿ 9.00 ಗಂಟೆಯ ಸುಮಾರಿಗೆ ಅಲ್ಲೇ ತನ್ನ ಗಂಡ ಯಮನಪ್ಪನನ್ನು ಹೊಡೆದು ಸಾಯಿಸಿ ಒಂದು ಗೋಣಿ ಚೀಲದಲ್ಲಿ ತುಂಬಿಕೊಂಡು ಮೋಟರ್ ಸೈಕಲ್ ಮೇಲೆ ತೆಗೆದುಕೊಂಡು ಮುದ್ದೇಬಿಹಾಳ ಮುಖಾಂತರ ತಂಗಡಗಿಗೆ ಹೋಗಿ ಅಲ್ಲಿ ಕೃಷ್ಣಾ ನದಿಯ ಬ್ರೀಜ್‌ದ ಮೇಲಿಂದ ಗೋಣಿ ಚೀಲದಿಂದ ಬಿಚ್ಚಿ ರಾತ್ರಿ 10.30 ಗಂಟೆಯ ಸುಮಾರಿಗೆ ತನ್ನ ಗಂಡನ ಶವವನ್ನು ಯಾರಿಗೂ ಸಿಗಬಾರದು ಅಂತಾ ನದಿಯಲ್ಲಿ ಬಿಸಾಕಿ ಹೋಗಿದ್ದು, ಈ ಕುರಿತು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ : 137/2021 ಕಲಂ 302. 201 ಐಪಿಸಿ ನೇದ್ದರ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರರಕಣದಲ್ಲಿಯ ಆರೋಪಿತರ ಪತ್ತೆ ಕುರಿತು ಶ್ರೀ ಹೆಚ್.ಡಿ. ಆನಂದ ಕುಮಾರ್. ಐಪಿಎಸ್. ಪೊಲೀಸ್ ಅಧೀಕ್ಷಕರು ವಿಜಯಪುರ. ಡಾ॥ ರಾಮ ಅರಸಿದ್ದಿ ಕೆ.ಎಸ್.ಪಿ.ಎಸ್, ಹೆಚ್ಚುವರಿ ಪೊಲೀಸ್ ಅಧೀಕ್ಷಕರು ವಿಜಯಪುರ ರವರ ಮಾರ್ಗದರ್ಶನದಲ್ಲಿ ಶ್ರೀ ಅರುಣಕುಮಾರ ಕೋಳೂರ. ಪೊಲೀಸ್ ಉಪಾಧೀಕ್ಷಕರು ಬಸಬನ ಬಾಗೇವಾಡಿ, ರವರ ನೇತೃತ್ವದಲ್ಲಿ ಶ್ರೀ ಆನಂದ ವಾಘಮೋಡೆ ಸಿ.ಪಿ.ಐ ಮುದ್ದೇಬಿಹಾಳ, ಶ್ರೀ ವಿನೋದ ದೊಡಮನಿ. ಪಿ.ಎಸ್.ಐ [ಕಾ:ಸು] ಮುದ್ದೇಬಿಹಾಳ ಹಾಗೂ ಸಿಬ್ಬಂದಿಯರವರನ್ನೊಳಗೊಂಡ ಒಂದು ತನಿಖಾ ತಂಡ ರಚಿಸಿದ್ದು ಇರುತ್ತದೆ.

ಸದರ ಪ್ರಕರಣವು ಅತೀ ಸೂಕ್ಷ್ಮತೆಯಿಂದ ಕೂಡಿದ್ದು, ಆರೋಪಿತರು ಯಾವುದೇ ಪುರಾವೆಗಳು ಬಿಡದೆ ಇರುವದರಿಂದ ಅರೋಪಿತರ ಪತ್ತೆ ಮಾಡುವ ಕೆಲಸವು ಅತೀ ಕಷ್ಟಕರವಾಗಿದ್ದರೂ ಸಹ ತನಿಖಾ ತಂಡದ ಸದಸ್ಯರು, ಬಾಗಲಕೋಟ, ಇಲಕಲ್, ಹುನಗುಂದ ಹಾಗೂ ವಿಜಯಪುರ ನಗರದಲ್ಲಿ ಆರೋಪಿತರ ತಪಾಸಣೆ ಮಾಡಿದಾಗ ದಿನಾಂಕ 16.08.2021 ರಂದು **ಆರೋಪಿತನಾದ (ಅ.ನಂ–1)**

**1) ವಿರೇಶ @ ಈರಪ್ಪ ತಂ: ಮಲ್ಲಣ್ಣ ಮಡಿವಾಳರ. ವಯಾ 29 ವರ್ಷ. ಸಾ: ಬಳಗಾನೂರ.**

**2) ಮಡಿವಾಳಪ್ಪ ತಂ: ಮಲ್ಲಣ್ಣ ಮಡಿವಾಳರ.**

**3) ಕಾಶಿನಾಥ ತಂದೆ ತಮ್ಮಣ್ಣ ಮಡಿವಾಳರ.**

ಆರೋಪಿ ನಂ 1 ನೇದ್ದವನಿಗೆ ವಿಚಾರಣೆಗೆ ಒಳಪಡಿಸಲಾಗಿ ವಿರೇಶ @ ಈರಪ್ಪ ಇತನ ಹೆಂಡತಿಯಾದ ರೂಪಾ ಇವಳೊಂದಿಗೆ ಮೃತ ಯಮನಪ್ಪ @ ಕುಮಾರ ತಂದೆ ಮಾಂತಪ್ಪ ಮಡಿವಾಳರ ವಯಾ: 24 ವರ್ಷ ಸಾ: ಇಂಗಳಗಿ ತಾ: ಇಲಕಲ್ ಇವನು ಅನೈತಿಕ ಸಂಬಂದ ಹೊಂದಿರುತ್ತಾನೆ ಅಂತಾ ಸಂಶಯಪಟ್ಟು ಆತನಿಗೆ ಕೊಲೆ ಮಾಡುವ ಉದ್ದೇಶದಿಂದ ಆರೋಪಿ ನಂ. 2 ಮತ್ತು 3 ನೇದ್ದವರೊಂದಿಗೆ ಸಂಚುರೂಪಿಸಿ ಮೃತನಿಗೆ ಸಾಲದ ರೂಪದಲ್ಲಿ ಹಣಕೊಡುತ್ತೇವೆ ಬಾ ಅಂತಾ ಇಲಕಲ್ಲದಿಂದ ಬಳಗಾನೂರ ಗ್ರಾಮದ ಬಸವರಾಜ ಐನಾಪೂರ ಇವರ ಹೊಲಕ್ಕೆ ಕರೆಯಿಸಿ ದಿನಾಂಕ 06.08.2021 ರಂದು ಸಾಯಂಕಾಲ 6.30 ಗಂಟೆಗೆ ಕುಡಗೋಲದಿಂದ ಮೃತನ ಕುತ್ತಿಗೆಗೆ ಹೊಡಿದು ಬಾರಿ ಗಾಯ ಪಡಿಸಿ ಮರಣಪಡಿಸಿ ಸಾಕ್ಷಿ ನಾಶೆ ಮಡುವ ಉದ್ದೇಶದಿಂದ ಶವವನ್ನು ಗೋಣಿಚೀಲದಲ್ಲಿ ಹಾಕಿಕೊಂಡು ತಮ್ಮ ಮೋಟರ ಸೈಕಲ್ ಮೇಲೆ ಮುದ್ದೇಬಿಹಾಳ ಮಾರ್ಗವಾಗಿ ತಂಗಡಗಿ ಹತ್ತಿರ ಇರುವ ಕೃಷ್ಣಾನದಿ ಬ್ರಿಜ್ ಮೇಲೆ ಹೋಗಿ ಶವವನ್ನು ಎಸೆದ ಬಗ್ಗೆ ಒಪ್ಪಿಕೊಂಡಿರುತ್ತಾನೆ. ಆರೋಪಿತನಿಂದ ಕೃತ್ಯಕ್ಕೆ ಉಪಯೋಗ ಮಾಡಿದ ಮೋಟರ ಸೈಕಲ್ ನಂ. ಕೆಎ:29 ಕ್ಯೂ:2100. ನೇದನ್ನು ಹಾಗೂ ಆಯುಧವನ್ನು ಜಪ್ತ ಮಾಡಿದ್ದು ಇರುತ್ತದೆ.

ಸದರಿ ಪ್ರಕರಣವನ್ನು ಪತ್ತೆ ಹಚ್ಚಿ ಆರೋಪಿತನನ್ನು ಬಂಧಿಸುವಲ್ಲಿ ಯಶಸ್ವಿಯಾದ ತನಿಖಾ ತಂಡದ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು
ವಿಜಯಪುರ.